# ನಂಬಿ ಕೆಡುವವರ ಕಾಲವಿದು

**ಟಿವಿ ಚಾನಲ್‌ಗಳಲ್ಲಿ ಪ್ರಸಾರವಾಗುತ್ತಿರುವ ರಾಶಿ ಫಲ – ಭವಿಷ್ಯವಾಣಿಗಳು ಅವೈಜ್ಞಾನಿಕತೆಯ ಪರಮಾವಧಿ. ಚಾನೆಲ್‌ಗಳಲ್ಲಿ ಪ್ರಸಾರವಾಗುವ ರಾಶಿಫಲಗಳಿಗೂ, ಇತರ ಮಾಧ್ಯಮಗಳಲ್ಲಿ ಪ್ರಸಾರವಾಗುವ ಇದೇ ರೀತಿಯ ಕಾರ್ಯಕ್ರಮ, ಲೇಖನಗಳಿಗೂ ಯಾವುದೇ ವ್ಯತ್ಯಾಸವಿಲ್ಲ. ಇದ್ದರೆ ಅವುಗಳ ಪ್ರಭಾವದಲ್ಲಷ್ಟೆ. ಈ ಬೊಗಳೆಯನ್ನು ಈಗ ವೈಜ್ಞಾನಿಕವೆಂದು ಪ್ರತಿಬಿಂಬಿಸುವ ಪ್ರಯತ್ನಗಳೂ ನಡೆಯುತ್ತಿವೆ. ಇದಕ್ಕೆ ಇಂಬು ಕೊಟ್ಟಂತೆ ಇತ್ತೀಚೆಗೆ ಮುಂಬಯಿ ಉಚ್ಚನ್ಯಾಯಾಲಯದ ತೀರ್ಪು ಬಂದಿದೆ.**

**ಪ್ರೊ. ನರೇಂದ್ರ ನಾಯಕ್**

ಟಿವಿಗೆ ಈಡಿಯಟ್ ಬಾಕ್ಸ್ ಎಂಬ ಹೆಸರು ಕೆಲವೊಮ್ಮೆ ಅತ್ಯಂತ ಸೂಕ್ತವೆನಿಸುತ್ತದೆ. ಏಕೆಂದರೆ, ಈ ಮಾಧ್ಯಮದ ಮೂಲಕ ಬಿತ್ತರಿಸಲ್ಪಡುವ ಹಲವಾರು ಸಂಗತಿಗಳು ನೋಡುಗ–ಕೇಳುಗರನ್ನೂ ಮೂರ್ಖರನ್ನಾಗಿಸುವ ಏಕಮಾತ್ರ ಉದ್ದೇಶದಿಂದ ಬಿತ್ತರಿಸಲಾಗುತ್ತಿದೆ ಎಂಬುದು ನನ್ನ ಅಭಿಪ್ರಾಯ. ಜನರನ್ನು ಜಾಗೃತಗೊಳಿಸಲು, ಶಿಕ್ಷಣ ಕೊಡಲು, ಮಾಹಿತಿ ತಲುಪಿಸಲು ಬಳಕೆಯಾಗಬೇಕಾಗಿದ್ದ ಈ ಮಾಧ್ಯಮ ತದ್ವಿರುದ್ಧವಾದ ಉಪಯೋಗಗಳಿಗೆ ಮೀಸಲಾಗುತ್ತಿದೆ. ವಿಜ್ಞಾನದ ತತ್ವಗಳ ತಂತ್ರಜ್ಞಾನದ ಆವಿಷ್ಕಾರವಾಗಿರುವ ಟಿವಿಗಳು ಅವೈಜ್ಞಾನಿಕತೆಯ ಪ್ರಚಾರದಲ್ಲಿ ತೊಡಗಿ ವಿಜ್ಞಾನದ್ರೋಹಿ ಕೆಲಸ ಮಾಡುತ್ತಿವೆ.

ಟಿವಿ ಚಾನಲ್‌ಗಳಲ್ಲಿ ಪ್ರಸಾರವಾಗುತ್ತಿರುವ ರಾಶಿ ಫಲ – ಭವಿಷ್ಯವಾಣಿಗಳು ಅವೈಜ್ಞಾನಿಕತೆಯ ಪರಮಾವಧಿ. ಚಾನೆಲ್‌ಗಳಲ್ಲಿ ಪ್ರಸಾರವಾಗುವ ರಾಶಿಫಲಗಳಿಗೂ, ಇತರ ಮಾಧ್ಯಮಗಳಲ್ಲಿ ಪ್ರಸಾರವಾಗುವ ಇದೇ ರೀತಿಯ ಕಾರ್ಯಕ್ರಮ, ಲೇಖನಗಳಿಗೂ ಯಾವುದೇ ವ್ಯತ್ಯಾಸವಿಲ್ಲ. ಇದ್ದರೆ ಅವುಗಳ ಪ್ರಭಾವದಲ್ಲಷ್ಟೆ. ಮಾನವಕುಲವನ್ನು ಅವರವರ ಹುಟ್ಟಿದ ತಾರೀಕಿನ ಪ್ರಕಾರ ಹನ್ನೆರಡು ಗುಂಪುಗಳನ್ನಾಗಿ ವಿಂಗಡಿಸಿ, ಆ ಪ್ರತಿಯೊಂದು ಗುಂಪಿನ ಜೀವನದ ಆಗು–ಹೋಗುಗಳು ಒಂದೇ ಎಂದು ನಿರ್ಧರಿಸಿ ಅದರಂತೆ ಅವರಿಗೆ ಸಲಹೆ ಸೂಚನೆಗಳನ್ನು ನೀಡುವುದು ಎಷ್ಟು ಉಚಿತವೆಂಬುದನ್ನು ಪ್ರಜ್ಞಾವಂತರು ಗಮನಿಸಬೇಕು. ಇದಲ್ಲದೆ, ಈ ಬೊಗಳೆಯನ್ನು ಈಗ ವೈಜ್ಞಾನಿಕವೆಂದು ಪ್ರತಿಬಿಂಬಿಸುವ ಪ್ರಯತ್ನಗಳೂ ನಡೆಯುತ್ತಿವೆ. ಈ ದುರಂತಕ್ಕೆ ಇಂಬು ಕೊಟ್ಟಂತೆ ಇತ್ತೀಚೆಗೆ ಮುಂಬಯಿ ಉಚ್ಚನ್ಯಾಯಾಲಯದ ತೀರ್ಪು ಬಂದಿದೆ.

ಚಾನಲ್‌ಗಳಲ್ಲಿ ಬೆಳಗ್ಗಿನ ಹೊತ್ತು ಈ ಜ್ಯೋತಿಷಿಗಳ ಸಂತಾನವೇ ಪ್ರತ್ಯಕ್ಷವಾಗುತ್ತದೆ. ದೇವ ಮಾನವರಂತೆ ಪೋಷಾಕುಗಳನ್ನು ಧರಿಸಿ, ಹಿನ್ನೆಲೆಯಲ್ಲಿ ವಿವಿಧ ದೇವ–ದೇವತೆಗಳ ಚಿತ್ರಗಳನ್ನು ಬಿಂಬಿಸಿ ಈ ಜ್ಯೋತಿಷಿಗಳು ಇಡೀ ಜಗತ್ತಿನ ಆಗು–ಹೋಗುಗಳ ಮೇಲೆ ತಮ್ಮ ಹಿಡಿತವಿದೆಯೆಂಬಂತೆ ಬೊಗಳೆ ಬಿಡುತ್ತಿರುತ್ತಾರೆ. ತಮ್ಮ ಹೆಸರುಗಳ ಎದುರಿಗೆ ವಿವಿಧ ಟೈಟಲ್‌ಗಳನ್ನು ಅಂಟಿಸಿ, ಉಪಾಧಿಗಳ ಮೂಲಕ ತಮ್ಮ ವರ್ಚಸ್ಸು ಹೆಚ್ಚಿಸುವುದಕ್ಕಾಗಿ ಪ್ರಯತ್ನ ಪಡುತ್ತಾರೆ.

ಇವರು ನುಡಿಯುವುದನ್ನು ಕೇಳಿದರಂತೂ ಆಶ್ಚರ್ಯವಾಗಬೇಕು. ದಿನದಲ್ಲಿ ಏನು ನಡೆಯಲಿದೆ, ಅದಕ್ಕೆ ಪರಿಹಾರ, ಲಕ್ಕಿ ನಂಬರ್, ಅದೃಷ್ಟದ ಬಣ್ಣ, ಕೆಲಸ ಕಾರ್ಯಗಳನ್ನು ನಡೆಸಲು ಸೂಕ್ತವಾದ ಸಮಯ, ಏನೆಲ್ಲಾ ಮಾಡಬೇಕು–ಬಾರದು ಎಲ್ಲಾ ವಿಷಯಗಳಲ್ಲೂ ಇವರ ಪಾಂಡಿತ್ಯಪೂರ್ಣ ವ್ಯಾಖ್ಯಾನಗಳು. ಮುಂಬರುವ ಸಮಸ್ಯೆಗಳನ್ನು ಗುರುತಿಸುವುದು ಮಾತ್ರವಲ್ಲದೇ, ಅವುಗಳ ಪರಿಹಾರಗಳನ್ನು ತಾವೇ ಸೂಚಿಸುತ್ತಾರೆ. ಇವರಲ್ಲಿ ಪ್ರತಿಯೊಬ್ಬರನ್ನು ಅನುಸರಿಸುವ, ಪರಮ ಭಕ್ತ ಮೂರ್ಖರು ತಮ್ಮ ಜ್ಯೋತಿಷಿ ಹೇಳಿದ್ದೇ ವೇದವಾಕ್ಯವೆಂದು ನಂಬಿ, ಅದರಂತೆ ಚಾಚೂ ತಪ್ಪದೆ ನಡೆಯುವವರೂ ಇದ್ದಾರೆ. ತಮ್ಮ ಜ್ಯೋತಿಷಿಯನ್ನು ಬಿಟ್ಟರೆ ಬೇರೆಯವರನ್ನು ಕಣ್ಣೆತ್ತಿಯೂ ನೋಡದೆ ಇರುವಷ್ಟು ಇವರಿಗೆ ಸ್ವಾಮಿಭಕ್ತಿಯಿದೆ.

ಇವರ ಈ ಬೊಗಳೆಗಳು ಎಷ್ಟರ ಮಟ್ಟಿಗೆ ಅಪ್ರಸ್ತುತವೆಂಬುದನ್ನು ಪ್ರಜ್ಞಾವಂತರು ಗಮನಿಸಬೇಕು. ಗ್ರಹಗತಿಗಳಲ್ಲಿ ಬರೆದುದನ್ನು ಬ್ರಹ್ಮನೂ ಬದಲಾಯಿಸಲಾಗುವುದಿಲ್ಲವೆಂದು ಹೇಳುವ ಇವರು, ಈ ಲಿಖಿತವು ಪೂಜೆ–ಪುರಸ್ಕಾರಗಳಿಂದ, ಇವರು ಸೂಚಿಸಿದ ಬಣ್ಣ ಧರಿಸುವುದರಿಂದ ಇವರು ಹೇಳಿದ ಆಚರಣೆಯಿಂದ ಹೇಗೆ ಬದಲಾಗುವುದೆಂದು ತಿಳಿಸಬೇಕು. ಇದಲ್ಲದೆ, ಈ ಗ್ರಹಗತಿಯನ್ನು ಅನುಸರಿಸಿ ನುಡಿಯಲಾಗುವ ಬೊಗಳೆ ವಿಜ್ಞಾನವೇ ಆದಲ್ಲಿ ಆಯಾ ಜ್ಯೋತಿಷಿ ಹೇಳುವುದಕ್ಕೆ ವ್ಯತ್ಯಾಸವಿರುವುದು ಏಕೆ? ಇವರು ಗ್ರಹಗಳ ಬಗ್ಗೆ ಹೇಳುವುದಾದರೆ ಈ ಮಧ್ಯೆ ಸೂರ್ಯನೆಂಬ ತಾರೆ, ಚಂದ್ರನೆಂಬ ಉಪಗ್ರಹ, ರಾಹು–ಕೇತುಗಳೆಂಬ ಆಸ್ತಿತ್ವದಲ್ಲಿ ಇಲ್ಲದ ವಿಷಯಗಳು ಹೇಗೆ ಬಂದವು?

ಇತ್ತೀಚೆಗಂತೂ ಪ್ರಳಯದ ಬಗ್ಗೆ ದಿನವೂ ಚರ್ಚೆ ನಡೆಯುತ್ತದೆ. ಓರ್ವ ಜ್ಯೋತಿಷಿಯಂತೂ 2000ದಲ್ಲಿ ಪ್ರಳಯವೆಂದು ಹೇಳಿ ನಗೆಪಾಟಲಾದುದನ್ನು ನಾವು ಪ್ರಾಯಶಃ ಮರೆತಿದ್ದೇವೆ. ಈಗ ಇದೇ ಜ್ಯೋತಿಷಿ ಹೊಸ ಅವತಾರವೊಂದರಲ್ಲಿ ಟಿ.ವಿ. ಚಾನೆಲ್‌ಗಳಲ್ಲಿ ರಾರಾಜಿಸುತ್ತಿದ್ದಾನೆ. ಇಂಗ್ಲಿಷ್‌ನಲ್ಲೊಂದು ಗಾದೆಯಿದೆ ಜನರಿಗೆ ತಮ್ಮ ಯೋಗ್ಯತೆಗೆ ತಕ್ಕ ಸರಕಾರ ಸಿಗುತ್ತದೆಂದು. ಪ್ರಾಯಶಃ ಇದನ್ನು ನಾವು ಬದಲಿಸಿ ಜನರಿಗೆ ಅವರವರ ಯೋಗ್ಯತೆಗೆ ತಕ್ಕ ಟಿ.ವಿ.ಚಾನೆಲ್‌ಗಳು ಸಿಗುತ್ತವೆಂದು ಹೇಳಬೇಕೇನೋ? ಇತ್ತೀಚೆಗಂತೂ ಕೆಲವು ತೈಲಗಳ ಮಿಶ್ರಣ ಮಾಡಿ ದೀಪ ಉರಿಸಿದರೆ ಪ್ರಳಯವಾಗುವುದಿಲ್ಲವೆಂದು ಹೇಳಿದ ಜ್ಯೋತಿಷಿಯೋರ್ವನ ಹೇಳಿಕೆ ಹಿಂದೆ ಯಾವ ಸ್ಥಾಪಿತ ಹಿತಾಸಕ್ತಿ ಇದೆಯೆಂಬುದನ್ನು ನಾವು ಹುಡುಕಬೇಕಾಗಿದೆ. ಅದು ಏನೇ ಇರಲಿ ಯಾರೋ ಹೇಳಿದ ತಲೆ ಹರಟೆಯನ್ನು ನಂಬಿ ತಮ್ಮ ಮಂದ ಬುದ್ಧಿಯನ್ನು ಬಟಾಬಯಲು ಮಾಡುವ ನಮ್ಮ ಜನತೆಯನ್ನು ಗಮನಿಸಿದರೆ ನಗಬೇಕೋ ಅಳಬೇಕೋ ಎಂದು ಗೊತ್ತಾಗುವುದಿಲ್ಲ.


ಫಲಜ್ಯೋತಿಷವೆಂಬ ಪೊಳ್ಳು ಹುಸಿ ವಿಜ್ಞಾನ ಪ್ರತಿಪಾದಿಸುವ ಎಲ್ಲ ಜ್ಯೋತಿಷಿಗಳಿಗೆ ನನ್ನದೊಂದು ಸವಾಲಿದೆ. ನಾನೊಂದು ನೋಟನ್ನು ಒಂದು ಲಕೋಟೆಯೊಳಗೆ ಹಾಕಿಡುತ್ತೇನೆ. ನಿಮ್ಮ ಜ್ಯೋತಿಷ್ಯವೆಂಬ ವಿಜ್ಞಾನದ ಶಕ್ತಿಯಿಂದ ಅದರ ನಂಬರನ್ನು ಹೇಳಿ (ಅದರ ಒಂಬತ್ತು ಅಂಕೆಗಳ ನಂಬರ್, ಅದರ ಮೌಲ್ಯ ಅಲ್ಲ). ನಿಮ್ಮದು ವಿಜ್ಞಾನವೆಂದು ಒಪ್ಪಿ, 10 ಲಕ್ಷ ರೂಪಾಯಿಯನ್ನು ನಿಮಗೆ ಕೊಡುತ್ತೇನೆ. ಆದರೆ, ಈ ಸವಾಲನ್ನು ಸ್ವೀಕರಿಸಲು ರೂ.10,000 ಠೇವಣಿಯಾಗಿರಿಸಬೇಕು. ನೀವು ಕೊಟ್ಟ ಉತ್ತರ ಸರಿಯಾದಲ್ಲಿ ಠೇವಣಿ ಹಣವನ್ನು 10 ಲಕ್ಷದೊಂದಿಗೆ ವಾಪಸ್ ಕೊಡುತ್ತೇನೆ. ತಪ್ಪಾದಲ್ಲಿ ಆ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.

ಇದನ್ನು ಮಾಡುವುದು ಬಿಟ್ಟು ಅಮಾಯಕರ ಜಾತಕಗಳನ್ನು ರಚಿಸಿ, ಅವರಿಗೆ ಬೇಡದುದನ್ನು ಹೇಳಿ, ಅವರ ತಲೆ ಹಾಳು ಮಾಡಬೇಕಾಗಿಲ್ಲ. ಕೊನೆಯದಾಗಿ, 2012ರ ಪ್ರಳಯವನ್ನು ದೀಪ ಬೆಳಗಿಸಿ ದೂರ ಮಾಡಲಿಚ್ಛಿಸುವವರಿಗೊಂದು ಕಿವಿ ಮಾತು ಅದನ್ನು ಮಾಡುವುದನ್ನು ನಿಲ್ಲಿಸಿ. ಏನಾಗುವುದೆಂದು ನೋಡೋಣ? ಈ ಹಾಸ್ಯಾಸ್ಪದ ವಿಷಯಗಳನ್ನು ನೋಡಿದಾಗ ಖ್ಯಾತ ವಿಚಾರವಾದಿ, ತತ್ವಜ್ಞಾನಿ ಬರ್ಟ್ರಾಂಡ್ ರಸೆಲ್ ಹೇಳಿದ ಘಟನೆಯೊಂದು ನೆನಪಾಗುತ್ತಿದೆ. ಚಳಿಗಾಲದ ಒಂದು ರಾತ್ರೆ ಲಂಡನ್‌ನ ಹೈಡ್ ಪಾರ್ಕ್‌ನಲ್ಲಿ ಒಬ್ಬ ಕುಡುಕ ಜೋರಾಗಿ ಕಿರಿಚಾಡುತ್ತಿದ್ದನಂತೆ. ಪೋಲೀಸರು ಏನಯ್ಯ ನಿನ್ನ ಗದ್ದಲವೆಂದು ಹೇಳಿದಾಗ ಆತ ಹೇಳಿದನಂತೆ ಇದೊಂದು ವಿಶೇಷ ಮಂತ್ರ ಇದರಿಂದ ಕಾಡಾನೆಗಳು ಓಡಿ ಹೋಗುತ್ತವೆ ಎಂದನಂತೆ. ಅದಕ್ಕೆ ಆ ಪೋಲೀಸಿನವ ನಿನಗೆ ತಲೆ ಕೆಟ್ಟಿದೆಯೇ? ಇಲ್ಲಿ ಹತ್ತಿರದ ಕಾಡಾನೆಯೇ ಸುಮಾರು 5000 ಮೈಲು ದೂರವಿದೆ ಎಂದನಂತೆ. ಅದಕ್ಕೆ ಕುಡುಕ ನೋಡಯ್ಯ ನನ್ನ ಮಂತ್ರದಲ್ಲಿ ಎಷ್ಟು ಶಕ್ತಿಯಿದೆಯಂತ ಈಗಲಾದರೂ ತಿಳಿಯಿತಾ ಎಂದನಂತೆ. ಅದೇ ರೀತಿಯಲ್ಲಿ ಪ್ರಾಯಶ: 2012ರಲ್ಲಿ ಪ್ರಳಯವಾಗದಿದ್ದಲ್ಲಿ ಅದು ಈ ದೀಪಗಳನ್ನು ಉರಿಸಿದ ಕಾರಣವೆನ್ನಬಹುದೇನೊ? ಅಥವಾ ಈ ದೀಪಗಳನ್ನು ಉರಿಸುವುದರ ಮೂಲಕ ಕ್ರೂರ ಹಿಮಕರಡಿಗಳನ್ನು ದೂರ ಓಡಿಸುತ್ತಿರಬಹುದೇನೊ?

ಈ ಬಗ್ಗೆ ವಿಚಾರವಾದಿಗಳು ನಾವು ಚಳವಳಿಯನ್ನೇ ನಡೆಸುತ್ತಿದ್ದೇವೆ. 2012ರ ಪ್ರಳಯದ ಬಗ್ಗೆ ಸಾಕಷ್ಟು ವಿಚಾರಗೋಷ್ಠಿಗಳು, ಮೂಢನಂಬಿಕೆಗಳನ್ನು ಪ್ರಚಾರ ಮಾಡುವ ಮಾಧ್ಯಮಗಳ ಬಗ್ಗೆ ವಿಚಾರಗೋಷ್ಠಿ, ಸಂಕಿರಣಗಳು ನಡೆದಿವೆ. ಜನತೆ ಜಾಗೃತರಾಗಬೇಕಷ್ಟೇ.

( ಲೇಖಕರು ಫ್ರೀಡಮ್ ಆಫ್ ಇಂಡಿಯಾ ರ್‍ಯಾಷನಲಿಸ್ಟ್ ಅಸೋಸಿಯೇಷನ್ ಅಧ್ಯಕ್ಷರು)

feedback@vijayanext.com



ಇಲಸ್ಟ್ರೇಶನ್: ಕಿರಣ್ ಮಾಡಾಳು